**"ಕನ್ನಡ ಕಾಯಕ ವರ್ಷ 2020-21"**

# ಮಂಗಳೂರು ವಿಶ್ವವಿದ್ಯಾನಿಲಯ

ಸಂ.ಮಂವಿ/ಸಾವಿ/ಕೋವಿಡ್-19 ಸೆಲ್/2020-21/ಜಿ6

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ-574 199
ದಿನಾಂಕ: 25.03.2021

## ಸುತ್ತೋಲೆ

ವಿಷಯ: **'ಕೋವಿಡ್-19'** (2ನೇ ಅಲೆ) ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಎಲ್ಲಾ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಕೋವಿಡ್-19 ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ 18.02.2021.
2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳು, ಕರ್ನಾಟಕ ಸರ್ಕಾರದ ಸುತ್ತೋಲೆ ದಿ: 08.02.2021.

*****

**'ಕೋವಿಡ್-19'** (2ನೇ ಅಲೆ) ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಇದನ್ನು ತಡೆಗಟ್ಟುವ ಸಲುವಾಗಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಎಲ್ಲಾ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಕೋವಿಡ್-19 ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಅಲ್ಲದೆ, ಶಿಕ್ಷಣಕ್ಕಾಗಿ ಕೇರಳದಿಂದ ಮಂಗಳೂರು, ಉಡುಪಿ, ಕೊಡಗು ಜಿಲ್ಲೆಗಳಿಗೆ ಬರುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಆರ್‌ಟಿ-ಪಿಸಿಆರ್ (RT-PCR) ಪರೀಕ್ಷೆಯನ್ನು ನಡೆಸುವ ಕುರಿತು ಉಲ್ಲೇಖ (1)ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳ, ಆಯುಕ್ತರ, ಸುತ್ತೋಲೆಯ ಆದೇಶದಂತೆ ಈ ಕೆಳಕಂಡಂತೆ ಕ್ರಮವಹಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

1. ಕೇರಳ ರಾಜ್ಯದಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳಿಗೆ ಆರ್‌ಟಿ-ಪಿಸಿಆರ್ (RT-PCR) ಪರೀಕ್ಷೆ ಕಡ್ಡಾಯವಾಗಿರುತ್ತದೆ. ಸದರಿ ಪರೀಕ್ಷೆ ನಡೆಸಿದ ವರದಿಯನ್ನು ಪರಿಶೀಲಿಸಿದ ನಂತರವೇ ತರಗತಿ/ಕಛೇರಿಗೆ ಹಾಜರಾಗಲು ಅನುಮತಿ ನೀಡಬಹುದು.
2. ತುರ್ತು ಸಂದರ್ಭದಲ್ಲಿ (ಮರಣ, ಮದುವೆ ಇತರ ಸಮಾರಂಭ ಇತ್ಯಾದಿಗಳಿಗೆ) ತೆರಳಬೇಕಾದಲ್ಲಿ ಇಲಾಖಾ ಮುಖ್ಯಸ್ಥರ ಪೂರ್ವಾನುಮತಿ ಪಡೆದು ನಂತರ ಪುನಃ ವಾಪಸ್ಸು ಬರುವಾಗ 72 ಗಂಟೆಗೆ ಮೀರದ RT-PCR ನೆಗೆಟಿವ್ ವರದಿಯನ್ನು ಸಲ್ಲಿಸತಕ್ಕದ್ದು.
3. RT-PCR ವರದಿ ಇಲ್ಲದ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರೀಕ್ಷೆಗೆ ಒಳಪಡಿಸಿ ನೆಗೆಟಿವ್ ವರದಿ ಬಂದ ಮೇಲೆ ತರಗತಿ/ಕಛೇರಿಗೆ ಹಾಜರಾಗುವಂತೆ ನೋಡಿಕೊಳ್ಳುವುದು.
4. ತರಗತಿ/ಕಛೇರಿಯ ಮುಖ್ಯ ದ್ವಾರದಲ್ಲಿ ಸ್ಯಾನಿಟೈಸರ್ ವ್ಯವಸ್ಥೆ ಮಾಡಿ, ಎಲ್ಲಾ ವಿದ್ಯಾರ್ಥಿಗಳು ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿಗಳು ಸ್ಯಾನಿಟೈಸ್ ಮಾಡಿದ ಬಳಿಕವೇ ತರಗತಿ/ಕಛೇರಿಗೆ ಹಾಜರಾಗಲು ಕ್ರಮಕೈಗೊಳ್ಳುವುದು.
5. ಕೇರಳ ರಾಜ್ಯದಿಂದ ಪ್ರತಿನಿತ್ಯ ಬರುವ ದೈನಂದಿನ ವಿದ್ಯಾರ್ಥಿಗಳು/ಸಿಬ್ಬಂದಿಗಳು 15 ದಿನಗಳಿಗೊಮ್ಮೆ RT-PCR ಪರೀಕ್ಷೆಗೆ ಒಳಪಡಿಸುವುದು. ಈ ವಿದ್ಯಾರ್ಥಿಗಳ/ಸಿಬ್ಬಂದಿಗಳ ಪಟ್ಟಿಯನ್ನು ಕೋವಿಡ್-19 ನೋಡಲ್ ಅಧಿಕಾರಿಯವರಿಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.
6. ಪುರುಷ ಮತ್ತು ಮಹಿಳೆಯರ ವಸತಿ ನಿಲಯದಲ್ಲಿ ಮಂಚಗಳ ನಡುವೆ ಅಂತರ ಕಾಪಾಡಿಕೊಳ್ಳುವುದು.

ಪು.ತಿ.ನೋ.

7. ಕೋವಿಡ್-19 ಪಾಸಿಟಿವ್ ಬಂದ ವಿದ್ಯಾರ್ಥಿಗಳ/ಸಿಬ್ಬಂದಿಗಳ ಸಂಪೂರ್ಣ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಕೋವಿಡ್-19 ನೋಡಲ್ ಅಧಿಕಾರಿಯವರಿಗೆ ನೀಡುವುದು (drrajukc@gmail.com).

8. ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜುಗಳಲ್ಲಿ ವಿವಿಧ ಪದವಿ/ಸ್ನಾತಕೋತ್ತರ ಕೋರ್ಸುಗಳು, ಸಂಶೋಧನೆಗಳು ನಡೆಯುತ್ತಿರುವುದರಿಂದ ಆಯಾಯ ವಿಭಾಗದ ಮುಖ್ಯಸ್ಥರಿಗೆ ಹಾಗೂ ವಿವಿಧ ವಸತಿ ನಿಲಯಗಳ ವಾರ್ಡನ್‌ರವರನ್ನು ಮೇಲ್ವಿಚಾರಣೆ ನಡೆಸಲು ಕ್ರಮಕೈಗೊಳ್ಳುವುದು.

**9. ಕಛೇರಿಗಳಲ್ಲಿ, ತರಗತಿಯಲ್ಲಿ, ಕ್ಯಾಂಪಸ್‌ನಲ್ಲಿ, ಊಟದ ಹಾಲ್‌ನಲ್ಲಿ, ಗ್ರಂಥಾಲಯದಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಹಾಗೂ ದೈಹಿಕ ಅಂತರ ಕಾಯ್ದುಕೊಳ್ಳುವುದು.**

**10. ಮಾಸ್ಕ್ ಧರಿಸದೇ ಇದ್ದಲ್ಲಿ ಹಾಗೂ ಗುಂಪುಗೂಡುವುದು ಮಾಡಿದ್ದಲ್ಲಿ ದಂಡ ವಿಧಿಸಲಾಗುವುದು. ನಿಯಮ ಮೀರಿದಲ್ಲಿ ಜಿಲ್ಲಾಡಳಿತ ವಿಧಿಸುವ ದಂಡಕ್ಕೆ ತಾವೇ ಬದ್ಧರಾಗಬೇಕಾಗುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ದ.ಕ. ಜಿಲ್ಲಾ ವೈದ್ಯಾಧಿಕಾರಿಗಳು ಗಸ್ತು ತಿರುಗಿ ನಿಗಾ ವಹಿಸಲಿರುವರು.**

ಈ ಸುತ್ತೋಲೆಯು ತಕ್ಷಣದಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

25/1/2021

ಕುಲಸಚಿವರು

ರಿಗೆ,

1. ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಗ್ರಂಥಪಾಲಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ, ವಾಣಿಜ್ಯ, ಕಲಾ ಮತ್ತು ಶಿಕ್ಷಣ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
5. ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ/ IQAC/ ದೈಹಿಕ ಶಿಕ್ಷಣ/ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ/ಕಾಲೇಜು ಅಭಿವೃದ್ಧಿ ಮಂಡಳಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
6. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು/ಸಂಯೋಜಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
7. ಕಾರ್ಯಕಾರಿ ಅಭಿಯಂತರರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
8. ಪ್ರೊ. ರಾಜುಕೃಷ್ಣ ಚಲನ್ನವರ್, ನೋಡಲ್ ಅಧಿಕಾರಿ –ಕೋವಿಡ್-19, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
9. ನಿರ್ದೇಶಕರು/ಮುಖ್ಯಸ್ಥರು/ಸಂಯೋಜಕರು/ ಗಣಕಯಂತ್ರ ಕೇಂದ್ರ, ವಿಶ್ವವಿದ್ಯಾನಿಲಯ ವಿಜ್ಞಾನ ಉಪಕರಣ ಕೇಂದ್ರ/ ಮಹಿಳಾ ಅಧ್ಯಯನ ಕೇಂದ್ರ/ಮೈಕ್ರೋಟ್ರೋನ್ ಕೇಂದ್ರ/ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯ/ ಪ್ರಸಾರಾಂಗ/ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ/OAST Cell/ಅಲ್ಪಸಂಖ್ಯಾತರ ಸಹಿತ ಇತರ ಹಿಂದುಳಿದ ವರ್ಗದವರ ಕ್ಷೇಮಪಾಲನಾ ವಿಶೇಷ ಘಟಕ/ ಡಾ. ಪಿ.ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ/ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ/ಗಾಂಧಿ ಅಧ್ಯಯನ ಕೇಂದ್ರ/CSEIP/CARRT/CARER/University Industry Interaction Centre/DUIMS/SC/ST Remedial Coaching Scheme/Media Centre for Journalists, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
10. ಅಧ್ಯಾಪಕ ಸಲಹೆಗಾರರು, ಪುರುಷರ/ಮಹಿಳೆಯರ/ಉದ್ಯೋಗಸ್ಥ ಮಹಿಳೆಯರ ವಸತಿಗೃಹ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
11. ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಪೀಠಗಳ ನಿರ್ದೇಶಕರು/ಸಂಯೋಜಕರುಗಳಿಗೆ.
12. ವೈದ್ಯಾಧಿಕಾರಿ, ಆರೋಗ್ಯ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
13. ಉಪಕುಲಸಚಿವರು/ಉಪನಿರ್ದೇಶಕರು/ ವಿಶೇಷಾಧಿಕಾರಿ, ಆಡಳಿತ/ಕುಲಸಚಿವರು (ಪರೀಕ್ಷಾಂಗ)/ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಘಟಕ/ಸಹಾಯಕ ಕುಲಸಚಿವರು/ಸಹಾಯಕ ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
14. ಕಾನೂನು ಘಟಕ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
15. ಆಡಳಿತ ನಿರ್ವಹಣೆಗಾರರು, ಕಾವೇರಿ/ನೇತ್ರಾವತಿ ಅತಿಥಿಗೃಹ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
16. ಎಲ್ಲಾ ಕಛೇರಿಯ ಅಧೀಕ್ಷಕರುಗಳಿಗೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
17. ವಿಶೇಷಾಧಿಕಾರಿ/ವಿಶೇಷ ಕರ್ತವ್ಯ ಅಧಿಕಾರಿ, ಕುಲಪತಿಯವರ ಕಾರ್ಯಾಲಯ/ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ.

ಎಲ್ಲಾ ವಿದ್ಯಾರ್ಥಿಗಳ/ ಸಿಬ್ಬಂದಿಗಳ ಗಮನಕ್ಕೆ ತರಲು